` C.R.P.67

| Form No.4 (Civil) Deposition Sheets (R.P.No.57) |
|---|

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಸ್ಪೆಷಲ್ ಕೇಸ್ ಸಂಖ್ಯೆಃ **49/2020**

ಪ್ರಾಸಾ. **2** ಚಾಸಾ. **1**

| | |
|---|---|
| ಸಾಕ್ಷಿದಾರರ ಹೆಸರು | :ಲೊಕೇಶ .ಡಿ |
| ತಂದೆ/ಗಂಡನ ಹೆಸರು | :ಲೇಟ್ ದಾಸಪ್ಪ |
| ವಯಸ್ಸು | :3 ವರ್ಷಗಳು |
| ಉದ್ಯೋಗ | : ಸ್ವಂತ ವ್ಯಾಪಾರ |
| ವಾಸ | : ಬೆಂಗಳೂರು |

ಪ್ರಮಾಣ ವಚನ ಬೋಧಿಸಿದ ದಿನಾಂಕಃ **6.08.2024**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಮೃತ ಮರಿಯಣ್ಣ.ಡಿ ನನ್ನ ಸ್ವಂತ ತಮ್ಮ. ಆರೋಪಿತರು ಗೊತ್ತು. ೧೯.೮.೨೦೧೮ ರಂದು ನನ್ನ ತಮ್ಮ ಮರಿಯಣ್ಣ ಕಾಣೆಯಾಗಿರುತ್ತಾರೆ ಎಂದು ದೊಡ್ಡಣ್ಣ ಮತ್ತು ನಾಗರಾಜುರವರು ನನಗೆ ಖರೆ ಮಾಡಿ ತಿಳಿಸಿದರು. ದೊಡ್ಡಣ್ಣ ಮತ್ತು ನಾಗರಾಜುರವರು ನನ್ನ ತಮ್ಮ ಪಚ್ಚಾರಲ ಹಳ್ಳಿಗೆ ಹೋಗಿ ಮೊಬೈಲ್ ಚಾರ್ಜ್ ಮಾಡಿಕೊಂಡು ಬರುತ್ತೇನೆಂದು ಹೇಳಿ ಹೋದವನು ವಾಪಸ್ಸು ಬಂದಿರುವುದಿಲ್ಲವೆಂದು ನನಗೆ ತಿಳಸಿದರು. ನಾನು ದಿನಾಂಕ ೨೦.೮.೨೦೧೮ ರಂದು ಬೆಳ್ಳಿಗೆ ಹೊಸಹಳ್ಳಿ ಪೋಲಿಸ್ ಠಾಣೆಗೆ ಹೋದೆ. ನಾನು ದೂರು ಕೊಟ್ಟಾಗ ಪೋಲಿಸರು ದೂರನ್ನು ಸ್ವೀಕರಿಸಲಿಲ್ಲ. ನಂತರ ನಾನು ನನ್ನ ದೊಡ್ಡಮ್ಮನ ಮಗನನ್ನು ಠಾಣೆಗೆ ಕರೆಸಿಕೊಂಡು ಪೋಲಿಸರ ಮೇಲೆ ಒತ್ತಡ ಎರಿದಾಗ, ಪೋಲಿಸರವರು ನನ್ನ ತಮ್ಮನನ್ನು ಹುಡುಕುತ್ತಿದ್ದೇವೆ ಮೂರು ದಿನ ಸಮಯ ಕೊಡಿ ಎಂದು ಹೇಳಿದರು.

ದಿನಾಂಕ ೨೪.೮.೨೦೧೮ ರಂದು ಪೋಲಿಸರವರು ನನ್ನಿಂದ ದೂರನ್ನು ಸ್ವೀಕರಿಸಿರುತ್ತಾರೆ. ಈಗ ತೋರಿಸಿದ ದಾಖಲೆ ಸದರಿ ದೂರಾಗಿದ್ದು, ಅದನ್ನು ನಿಷ ನಿಪಿ-೨೫ ಎಂದು ಮತ್ತು ಸಾಕ್ಷಿಯ ಸಹಿಯನ್ನು ೨೫(ಎ). ನನ್ನ ದೂರಿನಲ್ಲಿ ನನ್ನ ತಮ್ಮ ಸಿದ್ದಣ್ಣ, ದೊಡ್ಡಣ್ಣ, ಕೃಷ್ಣಪ್ಪ, ಚಿತ್ರಪ್ಪ ಮತ್ತು ನಾಗರಾಜುರವರ ಜೊತೆಯಲ್ಲಿ ಹೋಗಿದ್ದ ಆದ್ದರಿಂದ ನನಗೆ ಅವರುಗಳ ಮೇಲೆ ಅನುಮಾನ ಇದೆ ಎಂದು ಹೇಳಿರುತ್ತೇನೆ.

ದಿನಾಂಕ ೨೬.೮.೨೦೧೮ ರಂದು ಬೆಳ್ಳಿಗೆ ೯-೦೦ ಗಂಟೆಗೆ ಪೋಲಿಸರು ನನಗೆ ಖರೆ ಮಾಡಿ ನೀವು ಮತ್ತು ನಿಮ್ಮ ಸಂಭಂದಿಕರು ಮತ್ತು ಸ್ನೇಹಿತರು ಪೋಲಿಸ ಠಾಣೆಗೆ ಬನ್ನಿ ಎಂದು ತಿಳಿಸಿದರು. ನಂತರ ನಾನು ನನ್ನ ಸಂಭಂದಿಕರು ಮತ್ತು ಸ್ನೇಹಿತರು ಬೆಳ್ಳಿಗೆ ೧೧-೦೦ ಗಂಟೆಗೆ ಪೋಲಿಸ್ ಠಾಣೆಗೆ ಹೋದೆವು. ನಾವು ಪೋಲಿಸ್ ಠಾಣೆಗೆ ಹೋದಾಗ ಪೋಲಿಸ್ ಠಾಣೆಯಲ್ಲಿ ತಾಹಸೀಲ್ದಾರ್ ಮತ್ತು ೬ನೇ ಆರೋಪಿ ಮುನಿರಾಜು ಅಲಿಯಾಸ್ ಕುಂಟಮುನಿಯ ಇದ್ದರು. ಪೋಲಿಸರು ನನಗೆ ನನ್ನ ಸಂಭಂದಿಕರಿಗೆ ಗುಟ್ಟೆನರಸಿಂಹ ಸ್ವಾಮಿ ದೇವಸ್ಥಾನದ ಬಳಿ ಆರೋಪಿತರು  ಹಂದಿಯನ್ನು ಬೇಟೆಯಾಡಲು ವಿದ್ಯುತ್ತ ತಂತಿಗಳನ್ನು ಗೂಟಗಳಿಗೆ ಸುತ್ತಿ ವಿದ್ಯುತ್ತ ಸಂಪರ್ಕ ಕೊಟ್ಟು, ಆರೋಪಿತರು ೨ ಗುಂಪುಗಳಾಗಿ ಕಾಯುತ್ತಿದ್ದರು. ಆ ಸಮಯದಲ್ಲಿ ನನ್ನ ತಮ್ಮ ಮರಿಯಣ್ಣ. ಡಿ ಮೊಬೈಲ್ ಚಾರ್ಜ ಮಾಡಲು ಸದರಿ ದಾರಿಯಲ್ಲಿ ಹೋಗುತ್ತಿರುವಾಗ ವಿದ್ಯುತ್ತ ತಂತಿ ತಗುಲಿ ಮೃತ ಪಟ್ಟಿರುತ್ತಾನೆ ಎಂದು ತಿಳಿಸಿದರು. ಆರೋಪಿತರು  ಹಂದಿ ಬಿದ್ದಿರಬಹುದೆಂದು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ನನ್ನ ತಮ್ಮ ಸತ್ತು ಬಿದ್ದಿರುವುದನ್ನು ಕಂಡಿರುತ್ತಾರೆ. ಆಗ ಆರೋಪಿತರು ನನ್ನ ತಮ್ಮನನ್ನು ನೋಡಿ ಆತ ಕುರಿ ಕಾಯುವ ಹುಡುಗ ಎಂದು ಗುರುತಿಸಿ, ನನ್ನ ತಮ್ಮನ ಶವವನ್ನು ಬೆಡ್ ಶೀಟ್ ನಲ್ಲಿ ಸುತ್ತಿ , ಬೆಡ್ ಶೀಟ್ಗೆ  ಕೋಲುಗಳನ್ನು ಹಾಕಿ ಶವವನ್ನು ಉಜನಿ ಗ್ರಾಮದ ಬಳಿ ಇರುವ ಗೌರಮ್ಮನ ಕೆರೆಯ ಮದ್ಯದ ಭಾಗಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಇದ್ದ ಒಂದು ದೊಡ್ಡ ಗುಂಡಿಗೆ ಶವವನ್ನು ಹಾಕಿ ಮುಚ್ಚಿ ಬಂದಿರುತ್ತಾರೆ ಎಂದು ಪೋಲಿಸರು ನನಗೆ ತಿಳಿಸಿದರು.

ನಂತರ ಅದೇ ದಿವಸ ಪೋಲಿಸರವರು ನನ್ನನ್ನು ಮತ್ತು ನನ್ನ ಅಣ್ಣ ಮತ್ತು ಸಂಭಂದಿಕರನ್ನು ಮತ್ತು ೬ ನೇ ಆರೋಪಿಯನ್ನು ಗೌರಮ್ಮನ ಕೆರೆಯ ಬಳಿಗೆ ಕರೆದುಕೊಂಡು ಹೋದರು. ಆಗ ೬ನೇ ಆರೋಪಿ ಕೆರೆಯ ಮದ್ಯ ಭಾಗದ ಗುಂಡಿಯನ್ನು ತೋರಿಸಿ, ಸದರಿ ಗುಂಡಿಯಲ್ಲಿ ನನ್ನ ತಮ್ಮ ಶವವನ್ನು ಹೂತಿರುವುದಾಗಿ ತಿಳಿಸಿದನು. ಸ್ಥಳದಲ್ಲಿ ಪೋಲಿಸರು ಮತ್ತು ತಹಸೀಲ್ದಾರವರು ಇದ್ದರು. ಪೋಲಿಸರು ೪ ಜನ ಕೂಲಿ ಕಾರ್ಮಿಕರನ್ನು ಸ್ಥಳಕ್ಕೆ ಕರೆಸಿದರು. ನಂತರ ಕೂಲಿಕಾರ್ಮಿಕರ ಕೈಯಲ್ಲಿ ಸದರಿ ಗುಂಡಿಯನ್ನು ತೆಗೆಸಿದರು. ಗುಂಡಿ ಒಳಗೆ ಬೆಡ್ ಶೀಟ್ ನಲ್ಲಿ ಸುತ್ತಿದ್ದ ಒಂದು ಶವ ಪತ್ತೆ ಆಯ್ತು. ಬೆಡ್ ಶೀಟ್ ನನ್ನು ತೆಗೆದು

ಶವವನ್ನು ನನಗೆ ತೋರಿಸಿದರು. ಆಗ ನಾನು ಶವವನ್ನು ನೋಡಿ ನನ್ನ ತಮ್ಮನ ಶವ ಎಂದು ಗುರುತಿಸಿದೆ. ಆ ಸಂದರ್ಭದಲ್ಲಿ ಶವ ಮೇಲಿದ್ದ ವಸ್ತುಗಳನ್ನು ತೆಗೆದುಕೊಂಡು ಮಹಜರ್ ಕ್ರಮ ಜರುಗಿಸಿದರು. ಪೋಲಿಸರವರು ಸ್ಥಳದಲ್ಲಿ ವೀಡಿಯೋ ಮತ್ತು ಪೋಟೋಗಳನ್ನು ತೆಗೆದಿರುತ್ತಾರೆ ಮತ್ತು ಲೇಪ್ ಟಾಪ್ ನಲ್ಲಿ ಬರೆದುಕೊಳ್ಳುತ್ತಿದ್ದರು. ನಂತರ ಪೋಲಿಸರು ದಾಖಲೆಗಳನ್ನು ಸ್ಥಳದಲ್ಲೇ ಪ್ರಿಂಟ್ ಮಾಡಿರುತ್ತಾರೆ. ನಾನು ನನ್ನ ತಮ್ಮನ ಶವವನ್ನು ನೋಡಿದಾಗ ಶವ ಊದಿಕೊಂಡಿತ್ತು. ಗುರುತಿಸಲು ಆಗುತ್ತಿರಲಿಲ್ಲ. ತಲೆಯ ಮೇಲೆ ಕೂದಲು ಉದುರಿತ್ತು, ಬಲ ಪಕ್ಕೆಯ ಬಳಿ ಮತ್ತು ಬಲಗಾಲಿನ ಬಳಿ ಸುಟ್ಟ ಗಾಯ ಆಗಿತ್ತು. ಕಾಲಿನ ಮೇಲೆ ಚರ್ಮ ಸುಲಿದಂತಾಗಿತ್ತು.

ನನ್ನ ತಮ್ಮನ ಪೋಟೋ ಮತ್ತು ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ.

ಅವುಗಳನ್ನು ಈಗ ನೋಡುತ್ತಿದ್ದು, ಪೋಟೋಗಳನ್ನು ಈಗಾಗಲೇ ನಿಷ ನಿಪಿ-೪ ರಿಂದ ೨೪ ಎಂದು ಗುರುತಿಸಲಾಗಿದೆ. ಶವದ ಮೇಲಿದ್ದ ಬಟ್ಟೆ ಗಳು ಮತ್ತು ಸ್ಥಳದಲ್ಲಿ ವಶ ಪಡೆಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವಸ್ತುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಸದರಿ ವಸ್ತುಗಳನ್ನು ಈಗಾಗಲೇ ಮೂಮಾ -೧ ರಿಂದ ೮ ಎಂದು ಗುರುತಿಸಲಾಗಿದೆ.

೬ನೇ ಆರೋಪಿ ಕುಂಟಮುನಿಯ ನೋಡಿದರೆ ಗುರುತಿಸಬಲ್ಲೆ. ಆರನೇ ಆರೋಪಿ ಈ ದಿವಸ ನ್ಯಾಯಾಲಯದ ಮುಂದೆ ನಿಂತಿರುತ್ತಾನೆ. ಸಾಕ್ಷಿ ೬ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಪಿ.ವೈ.ಆರ್ ವಕೀಲರಿಂದ ೨,೩,೭ ಮತ್ತು ೮ ನೇ ಆರೋಪಿತರ ಪರವಾಗಿಃ</u>

ಆ ದಿವಸ ನಾನು ಪೋಲಿಸ ಠಾಣೆಗೆ ೧೧-೦೦ ಗಂಟೆಗೆ ಹೋಗಿರುತ್ತೇನೆ. ತಾಹಸೀಲ್ದಾರು ಮತ್ತು ಪೋಲಿಸರವರು ಪೋಲಿಸ್ ಠಾಣೆಯಲ್ಲಿ ನನ್ನ ವಿಚಾರಣೆ ಮಾಡಿರುವುದಿಲ್ಲ. ನಾನು ಪೋಲಿಸ್ ಠಾಣೆ ಹೋಗುವ ಅಷ್ಟರಲ್ಲಿ ತಾಹಶೀಲ್ದಾರವರು ಪೋಲಿಸ್ ಠಾಣೆಗೆ ಬಂದಿದ್ದರು. ನಾವು ಪೋಲಿಸ್ ಠಾಣೆಯಲ್ಲಿ ಸುಮಾರು ೧೦-೧೫ ನಿಮಿಷ ಇದ್ದೆವು.

ನಾವು ಪೋಲಿಸ್ ಠಾಣೆಯಿಂದ ಸದರಿ ಗೌರಮ್ಮನ ಕೆರೆಗೆ ೧೫ ನಿಮಿಷಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಯಾರು ಇರಲಿಲ್ಲ. ಗ್ರಾಮಸ್ಥರು ಸುಮಾರು ೮೦ ರಿಂದ ೧೦೦ ಜನ ಸೇರಿದ್ದರು. ಕುರಿ ಕಾಯುವ ಸ್ವಲ್ಪ ಹುಡುಗರು ಸಹ ಸ್ಥಳಕ್ಕೆ ಬಂದಿದ್ದರು. ಸ್ಥಳಕ್ಕೆ ಸುಮಾರು ೨ ಪೋಲಿಸ್ ಜೀಪ್ ಬಂದಿತ್ತು. ಪೋಲಿಸ್ ಜೀಪ್ ಕೆರೆಯ ದಡದ ಹತ್ತಿರ ಕಾಲುದಾರಿಯ ಬಳಿ ನಿಂತಿತ್ತು. ನಾವು ಜೀಪನ್ನು ಇಳಿದು ಕೆರೆಯ ಬಳಿಗೆ ನಡೆದುಕೊಂಡು ಹೋಗಿರುತ್ತೇವೆ.

ಜೀಪ್ ನಿಲ್ಲಿಸಿದ್ದ ಸ್ಥಳದಿಂದ ಶವ ದೊರೆತ ಸ್ಥಳಕ್ಕೆ ಸುಮಾರು ೧೦೦ ಮೀಟರ್ ಆಗುತ್ತದೆ. ನಾವು , ಊರಿನ ಜನ, ತಹಶೀಲ್ದಾರ್ ಮತ್ತು ಪೋಲಿಸರವರು ಸದರಿ ಸ್ಥಳಕ್ಕೆ ನಡೆದುಕೊಂಡು ಹೋಗಿರುತ್ತೇವೆ. ಪೋಲಿಸರು ಸ್ಥಳದಲ್ಲಿ ಕೈಯಲ್ಲಿ ಬರೆದುಕೊಂಡಿರುತ್ತಾರೆ ಮತ್ತು ಲ್ಯಾಪ್ ಟಾಪ್ ನಲ್ಲು ಸಹ ಟೈಪ್ ಮಾಡಿರುತ್ತಾರೆ. ಪೋಲಿಸರವರು ಮೊದಲು ಹಾಳೆಯಲ್ಲಿ ಬರೆದುಕೊಂಡು ನಂತರ ಅದನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು ಎಂದರೆ ಸರಿ. ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದ್ದ ಮತ್ತು ಕೈನಲ್ಲಿ ಬರೆದ ಪೋಲಿಸ್ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ. ಬರೆಯಲು ಪೇಪರು ಮತ್ತು ಪೆನನ್ನು ಪೋಲಿಸರಿಗೆ ನಾನೇ ಕೊಟ್ಟಿರುತ್ತೇನೆ. ಸುಮಾರು ೧೧-೩೦ ಇಂದ ೧.೩೦ ವರೆಗು ಸದರಿ ಮಹಜರ್ ನಡೆದಿರುತ್ತದೆ. ನಂತರ ೧-೪೫ ರಿಂದ ೪.೩೦ ವರೆಗು ಮಹಜರ್ ಕ್ರಮ ನಡೆಸಿರುತ್ತಾರೆ. ನಾನು ಮಹಜರ್ ದಾಖಲೆಗೆ ಸಹಿ ಮಾಡಲು ತಯಾರಿದ್ದೆ. ಆದರೇ ಪೋಲಿಸರವರು ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಮಹಜರ್ ದಾಖಲೆಗೆ ನಮ್ಮ ಗ್ರಾಮದ ದೇವರಾಜು ಮತ್ತು ಈರಣ್ಣ ಹಾಗೂ ಚಿತ್ರಪ್ಪ ಸಹಿ ಮಾಡಿರುತ್ತಾರೆ. ಗಂಗಾಧರಪ್ಪ ಮತ್ತು ನಂಜುಂಡಪ್ಪ ಸಹ ಸಹಿ ಮಾಡಿರುತ್ತಾರೆ, ಅವರುಗಳು ನಮ್ಮ ಗ್ರಾಮದವರಲ್ಲ. ನಾವುಗಳು ಸಹಿ ಮಾಡಿದಾಗ ಸಮಯ ಸುಮಾರು ೨.೩೦ ಗಂಟೆ ಆಗಿರಬಹುದು. ಪೋಲಿಸರು ಜೀಪಿನಲ್ಲಿದ್ದ ಪ್ರಿಂಟ್ ರ ನಿಂದ ಸದರಿ ದಾಖಲೆಗಳ ಪ್ರಿಂಟ್ ತಗೆದಿರುತ್ತಾರೆ. ಪೋಲಿಸ್ ಸಿಭಂದಿಗಳು ಪ್ರಿಂಟನ್ನು ಪೋಲಿಸ್ ಜೀಪ್ ನಲ್ಲಿದ್ದ ಪ್ರಿಂಟ್ ರ ನಿಂದ ತೆಗೆದುಕೊಂಡುಬಂದಿರುತ್ತೇವೆ ಎಂದು ನನಗೆ ತಿಳಿಸಿದರು.

ಪ್ರಿಂಟ್ ತೆಗೆಯುವಾಗ ನಾನು ಪೋಲಿಸ್ ಜೀಪ್ ಹತ್ತಿರ ಹೋಗಿರಲಿಲ್ಲ. ನಾನು ಸ್ಥಳದಲ್ಲೇ ಇದ್ದೆ. ೬ನೇ ಆರೋಪಿಯನ್ನು ಪೋಲಿಸರವರು ಯಾವಾಗ ಭಂದಿಸಿದರು ಮತ್ತು ೬ನೇ ಆರೋಪಿ ಎಷ್ಟು ದಿನಗಳಿಂದ ಪೋಲಿಸ್ ಠಾಣೆಯಲ್ಲಿ ಇದ್ದನು ಎಂದು ನನಗೆ ಗೊತ್ತಿಲ್ಲ. ಪೋಲಿಸರವರು ೬ನೇ ಆರೋಪಿಯನ್ನು ಯಾವ ವಿಚಾರಕ್ಕೆ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಮತ್ತು ಘಟನೆಯ ವಿಚಾರಗಳನ್ನು ನಾನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

೬ನೇ ಆರೋಪಿಯನ್ನು ಹೊರತು ಪಡಿಸಿ ಉಳಿದ ಆರೋಪಿಯನ್ನು ಈ ದಿವಸ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಲಿಸರು ಮತ್ತು ತಹಶೀಲ್ದಾರ್ ಜೊತೆ ಗೌರಮ್ಮನ ಕೆರೆಯ ಬಳಿ ಹೋಗಿರಲಿಲ್ಲ, ನನ್ನ ಸಮ ಕ್ಷಮ ಯಾವುದೇ ಶವವನ್ನು, ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಮತ್ತು ಮೂಮಾ ೧ ರಿಂದ ೮ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರವರೇ ನನ್ನನ್ನು ಮತ್ತು

ತಹಶೀಲ್ದಾರ್ ರನ್ನು ಗುಂಡಿಯ ಬಳಿಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿ ೬ನೇ ಆರೋಪಿ ಸ್ಥಳವನ್ನು ತೋರಿಸಿದ ಮೇಲೆ ಪೋಲಿಸರು ನಮ್ಮನ್ನು ಮತ್ತು ತಹಶೀಲ್ದಾರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ೬ನೇ ಆರೋಪಿ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ನಾನು ಪೋಲಿಸರ ಮಾತನ್ನು ಕೇಳಿಕೊಂಡು ೬ನೇ ಆರೋಪಿಯೇ ಶವ ಇದ್ದ ಸ್ಥಳವನ್ನು ತೋರಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಸರಿಯಲ್ಲ.

ಈ ಘಟನೇ ನಡೆಯುವ ಸಂದರ್ಭದಲ್ಲಿ ನಮ್ಮ ಬಳಿ ನೂರು ಕುರಿ ಇತ್ತು. ಘಟನೆ ನಡೆಯುವ ಸಂದರ್ಭದಲ್ಲಿ ಜೊತೆಗಿದ್ದ ಕುರಿ ಕಾಯುವ ಹುಡುಗರ ಬಳಿ ಎಷ್ಟು ಕುರಿ ಇತ್ತು ಎಂದು ನನಗೆ ಸರಿಯಾಗಿ ಗೊತ್ತಿಲ್ಲ.

ಆರೋಗ್ಯ ಸಮಸ್ಯೆಗಳಿಂದ ಆಗಾಗೇ ಒಂದು ಎರಡು ಕುರಿಗಳು ಸಾಯುತ್ತವೆ ಎಂದರೆ ಸರಿ. ಕುರಿಗಳು ಸತ್ತರೆ ಸಾಮಾನ್ಯವಾಗಿ ಕುರಿಗಳು ಸತ್ತ ಸ್ಥಳದಲ್ಲೇ ಅಂದರೇ ಎಲ್ಲಿ ಮಂದೆ ಹಾಕಿರುತ್ತೇವೊ ಅಲ್ಲೇ ಕುರಿಯ ಶವವನ್ನು ಮಣ್ಣು ಮಾಡುತ್ತೇವೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸತ್ತ ಕುರಿಗಳನ್ನು ಮುಚ್ಚುವುದು ಸಹಜ. ಸಾಕ್ಷಿ ಮುಂದುವರೆದು ಸತ್ತ ಕುರಿಗಳನ್ನು ಏನೂ ಮಾಡುತ್ತಾರೆ ಎಂದು ನನಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ.

ಸಾಮಾನ್ಯವಾಗಿ ಕುರಿ ಕಾಯುವವರು ೧೫೦ ರಿಂದ ೨೦೦ ಕಿ.ಲೋ ದೂರ ಕುರಿ ಕಾಯಿಕೊಂಡು ಹೋಗಿ ಕುರಿ ಕಾಯುವ ವ್ಯಕ್ತಿ ಸತ್ತರೆ, ಆ ವ್ಯಕ್ತಿಯನ್ನು ಸತ್ತ ಸ್ಥಳದ ಹತ್ತಿರ ಆತನ ಸಂಭಂದಿಕರನ್ನು ಕರೆಸಿಕೊಂಡು ಮಣ್ಣು ಮಾಡುತ್ತಾರೆ ಎಂದರೆ ಸರಿಯಲ್ಲ.

ನನ್ನ ತಮ್ಮ ಅದೇ ರೀತಿ ಆಕಸ್ಮಿಕವಾಗಿ ಮೃತ ಪಟ್ಟಿರುತ್ತಾನೆ, ನಾವು ನನ್ನ ತಮ್ಮನ ಶವವನ್ನು ಸುತ್ತ ಮುತ್ತಿನ ಸ್ಥಳದಲ್ಲಿ ಮಣ್ಣು ಮಾಡಿ ಬಂದಿರುತ್ತೇವೆ, ಈಗ ಆರೋಪಿತರಿಂದ ಹಣವನ್ನು ಪಡೆಯಲು ಅವರುಗಳ ವಿರುದ್ದ ಸುಳ್ಳು ದೂರನ್ನು ಕೊಟ್ಟು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ನನ್ನ ತಮ್ಮನ ಸಾವಿಗೂ ಯಾವುದೇ ರೀತಿ ಸಂಭಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನಾವು ಸ್ಥಳಕ್ಕೆ ಹೋಗುವ ಸಂದರ್ಭದಲ್ಲಿ ೪ ಜನ ಕಾರ್ಮಿಕರು ಸಹ ಸ್ಥಳಕ್ಕೆ ಬಂದಿರುತ್ತಾರೆ. ಕಾರ್ಮಿಕರು ಸ್ಥಳಕ್ಕೆ ಹೇಗೆ ಬಂದರೂ ಎಂದು ನನಗೆ ಗೊತ್ತಿಲ್ಲ. ಅದಾದ ನಂತರ ನಾನು ಮತ್ತೆ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ನಾನು ದೂರು ಕೊಟ್ಟ ದಿವಸವೇ ಪೋಲಿಸ್ ರವರು ಮಹಜರ್ ಕ್ರಮ

ಜರುಗಿಸಿರುತ್ತಾರ ಎಂದರೇ ಸಾಕ್ಷಿ ದೂರು ಕೊಟ್ಟ ದಿವಸ ಮಹಜರ್ ಕ್ರಮ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಾವು ಸ್ಥಳದಿಂದ ಶವವನ್ನು ಪಡೆದು ನೇರವಾಗಿ ನಮ್ಮ ಗ್ರಾಮಕ್ಕೆ ಹೋಗಿರುತ್ತೇವೆ. ನಾವು ಸ್ಥಳವನ್ನು ಬಿಟ್ಟಾಗ ಸುಮಾರು ೫ ರಿಂದ ೫.೩೦ ಆಗಿತ್ತು. ನಾನು ಆ ದಿವಸ ಬೆಳಿಗ್ಗೆ ೧೧-೦೦ ರಿಂದ ಸುಮಾರು ೫.೩೦ ಗಂಟೆಯವರೆಗು ಸ್ಥಳದಲ್ಲಿ ಇದ್ದೆ ಎಂದರೆ ಸರಿ.ದಿನಾಂಕ ೨೬.೮.೨೦೧೮ ರಂದು ಪೋಲಿಸರವರು ಠಾಣೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಪೋಲಿಸರವರು ಸ್ಥಳದಲ್ಲಿ ನನ್ನ ಹೇಳಿಕೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ಪೋಲಿಸರವರು ಶವವನ್ನು ಹೊರ ತೆಗೆದಿರುವ ವಿಚಾರವಾಗಿ ದಾಖಲೆಯನ್ನು ಮಾಡಿರುತ್ತೇವೆ ಎಂದು ಹೇಳಿ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ನಾನು ಸ್ಥಳದಲ್ಲಿ ಯಾವುದೇ ಸಹಿಯನ್ನು ಮಾಡದಿದ್ದರು ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗಳು ಸ್ಥಳದಲ್ಲಿ ಯಾವ ದಾಖಲೆಗಳಿಗೆ ಸಹಿ ಮಾಡಿರುತ್ತಾರೆ ಮತ್ತು ದಾಖಲೆಗಳಲಲ್ಲಿ ಏನೂ ಬರೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀಮತಿ ಎಸ್.ಪಿ ವಕೀಲರಿಂದ ಉಳಿದ ಆರೋಪಿತರ ಪರವಾಗಿಃ</u>

ನಿಷ ನಿಪಿ-೨೫ ದೂರನ್ನು ನಾನೇ ಬರೆದಿರುತ್ತೇನೆ. ದೂರನಲ್ಲಿ ದಿನಾಂಕವನ್ನು ತಿದ್ದಿರುತ್ತಾರೆ ಎಂದರೆ ಸಾಕ್ಷಿ ಪೋಲಿಸರವರು ತಿದ್ದಿರುತ್ತಾರೆ ಎಂದು ಹೇಳುತ್ತಾರೆ. ದೂರಿನಲ್ಲಿ ದಿನಾಂಕ ೨೨.೮.೨೦೧೮ ಎಂದು ಬರೆದಿರುತ್ತೇನೆ ಎಂದರೆ ಸರಿ. ಪೋಲಿಸರು ಪ್ರಕರಣವನ್ನು ದಿನಾಂಕ ೨೪.೮.೨೦೧೮ ರಂದು ದಾಖಲು ಮಾಡಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.